ಒಂದು ಸಣ್ಣ ಟ್ರಾನ್ಸಿಸ್ಟರ್ ಸಹ ಇತ್ತು. ಸಣ್ಣದಾಗಿ ಹೊಸ ಸಿನಿಮಾ ಹಾಡುಗಳನ್ನು ಕೇಳುತ್ತಿರುವುದನ್ನು ಯಾವಾಗಲೋ ಗಮನಿಸಿದ್ದೆ. ಕಿರುದನಿಯಲ್ಲಿ ಶೆಂಬಾಯಿಅಪ್ಪತ್ತಾ ಸಹ ದನಿಗೂಡಿಸಿ ಹಾಡುವರು. ಆಗ ಅವರ ಮುಖದಲ್ಲಿ ಒಬ್ಬ ನಟಿಯ ಭಾವನೆ ಉಂಟಾಗುವುದು, ಸ್ವಾಭಾವಿಕವಾಗಿಯೋ ಅಥವಾ ಅವರೇ ಪ್ರಯಾಸದಿಂದ ಮೈಗೂಡಿಸಿಕೊಂಡದ್ದೋ ಆಗಿರಬಹುದು. ಅದಕ್ಕೆ ಈ ರೀತಿಯಾದ ಸಿನಿಮಾಗಳೂ ಕಾರಣವಾಗಿರಬಹುದು. ನಾನು ತೆರೆಯನ್ನು ನೋಡುತ್ತಿರುವಾಗ ಅಪ್ಪತ್ತಾ ಆಗಾಗ ಬಾಗಿಲ ಬಳಿ ಕಣ್ಣು ಹಾಯಿಸುವುದು ಕಂಡಿತು.

ಸಿನಿಮಾದ ಮಧ್ಯಂತರವಾಯಿತು. 'ಏನು ಬೇಕು?' ಎಂದು ಪರ್ಸನ್ನು ತೆಗೆಯುತ್ತಾ ಕೇಳಿದರು ಶೆಂಬಾಯಿಅಪ್ಪತ್ತಾ. ಇದಕ್ಕೆ ಮುಂಚೆ ಸಿನಿಮಾಗೆ ಬಂದಾಗಲೆಲ್ಲ ಏನನ್ನೂ ಕೊಂಡು ತಿಂದದ್ದಿಲ್ಲ. ಅದು ಕೆಟ್ಟ ಅಭ್ಯಾಸ ಎಂಬುದು ಮನೆಯಲ್ಲಿನ ಒಂದು ಅಭಿಪ್ರಾಯ. ಇದಕ್ಕಾಗಿಯೇ ತಿನ್ನುವ ಪದಾರ್ಥಗಳನ್ನು ಮನೆಯಿಂದ ತರುವುದು ಪದ್ಧತಿ. ಆದರೆ, ಶೆಂಬಾಯಿಅಪ್ಪತ್ತಾಗೆ ಎಲ್ಲವೂ ಹೊರಗಿನಿಂದಲೇ ಮನೆಗೆ ಬರುವುದು. ಅದಕ್ಕೆ ಅವರು ಹಾಗೆ ಕೇಳುತ್ತಿರುವರೇನೋ. ನನಗೆ ಅಭ್ಯಾಸವಿಲ್ಲದ್ದರಿಂದ ಏನೂ ಬೇಡ ಎಂದು ನಿರಾಕರಿಸಿದೆನು. ಅದನ್ನು ಕಿವಿಗೆ ಹಾಕಿಕೊಳ್ಳದೆ, ಪರ್ಸಿನಿಂದ ಎರಡು ಹತ್ತು ರೂಪಾಯಿ ನೋಟುಗಳನ್ನು ತೆಗೆದು ನನ್ನ ಕೈಗೆ ಕೊಟ್ಟರು. ಬಾಗಿಲಲ್ಲಿ ಏನನ್ನೋ ನೋಡುತ್ತಾ. 'ಅದೋ ಆ ಕಡೆ ಕ್ಯಾಂಟೀನ್... ಅಂಗಡಿ ಇದೆ. ಅಲ್ಲಿ ನಿನಗೆ ಬೇಕಾದದ್ದನ್ನು ಕೊಂಡು ತಿಂದು ಸಿನಿಮಾದ ಬೆಲ್ ಹೊಡೆದಾಗ ಬಾ' ಎಂದರು. 'ಬೇಡ' ಎಂದದ್ದನ್ನು ಕಿವಿಗೆ ಹಾಕಿಕೊಳ್ಳದೆ, ನೋಟನ್ನು ನನ್ನ ಬೆರಳ ಸಂಧಿಯಲ್ಲಿ ಸಿಕ್ಕಿಸಿ ಕಳುಹಿಸಿದರು. 'ನಿಮಗೆ?...' ಎಂದು ಕೇಳಿದಾಗ, 'ಈಗ ಬೇಡ, ಹೋಗುವಾಗ ತಿನ್ನುವೆ. ನೀನು ಸಣ್ಣ ಹುಡುಗ' ಎಂದು ಮುದ್ದಾಗಿ ಮಾತಾಡಿ ಕಳುಹಿಸಿಕೊಟ್ಟರು. ಅಂಗಡಿಯನ್ನು ನೋಡುತ್ತಾ ನಡೆದೆನು.

ಈ ಮಧ್ಯೆ ಏನೇನೋ ನಡೆದುಹೋಯಿತು. ವಿದ್ಯಾಭ್ಯಾಸ, ಕೆಲಸದಲ್ಲಿ ಮುಳುಗಿ ನೆಂಟರಿಗಿಂತ ಸ್ನೇಹವೇ ಮುಖ್ಯವಾದಾಗ ಶೆಂಬಾಯಿಅಪ್ಪತ್ತಾರನ್ನು ನೋಡಲು ಅವಕಾಶವಾಗಲಿಲ್ಲ. ಒಂದೆರಡು ಸಂದರ್ಭಗಳಲ್ಲಿ ನೋಡಿದೆ. ಉಳಿದಂತೆ ಎಲ್ಲ ಅಮ್ಮ ಹೇಳಿದ ಸಂಗತಿಗಳೇ. 'ಅವರ ಸವತಿಗೆ ಒಬ್ಬ ಮಗ ಹುಟ್ಟಿದನಂತೆ. ಹೆರಿಗೆ ಸಮಯದಲ್ಲಿ ಮುಂದೆ ನಿಂತು ಎಲ್ಲವನ್ನೂ ನೋಡಿಕೊಂಡದ್ದು ಶೆಂಬಾಯಿಅಪ್ಪತ್ತಾರಂತೆ. ಅವನಿಗೆ ಶಿವಕುಮಾರ್ ಎಂದು ಹೆಸರಿಟ್ಟದ್ದು ಸಹ ಅವರೇ ಅಂತೆ. ಅವನನ್ನು ಶಿವ, ಶಿವ ಎಂದೇ ಕರೆಯುವರಂತೆ. ನಂತರ ಊರಿಗೆ ಹೋಗುವಾಗ ಬರುವಾಗ ಜತೆ ಇರಲು ಶಿವಕುಮಾರನೇ ಜತೆಯಿರುವನಂತೆ. ನಂತರ ಒಂದು ಹೆಣ್ಣು ಹುಟ್ಟಿತಂತೆ. ಅವಳು ಬಹಳ ಸುಂದರವಾಗಿದ್ದಳಂತೆ. ಆದರೆ ಮುಂದೆ ಏನಾಯಿತೋ ತಿಳಿಯದು. ಅವರ ನಡುವೆ ಒಂದು ವಿರಸ ಮೂಡಿತು. ಮಾತಿಲ್ಲ. ನಂತರ ಸಮಸ್ಯೆ ಮತ್ತಷ್ಟು ಬಿಗಡಾಯಿಸಿ ಕಾಯಂ ಆಗಿ ಸ್ವಂತ ಮನೆಗೆ ಹೊರಟುಹೋದರಂತೆ. ನಿನ್ನ ಬಗ್ಗೆಯೇ ಸದಾ ಕೇಳುತ್ತಿರುತ್ತಾಳೆ, ಒಮ್ಮೆ ಹೋಗಿ ನೋಡಿ ಬಾ' ಎಂದು ಅಮ್ಮ ಆಗಾಗ ಒತ್ತಾಯಿಸಿದಾಗ ನನಗೆ ಆಶ್ಚರ್ಯವಾಯಿತು. ಈ ಅಮ್ಮನೇ ಹೀಗೆ ಎಂದು ಅಂದುಕೊಂಡೆ.

ಒಂದೆರಡು ಸಲ ಹಣ್ಣುಗಳನ್ನು ತೆಗೆದುಕೊಂಡು ಹೋಗಿ ಕೊಟ್ಟು ನೋಡಿಬಂದೆ. ಪಾಪ ಬಹಳವೇ ಸೋತಿದ್ದರು. ಕೂದಲು ಬಿಳಿಯಾಗಿದ್ದರೂ ಒತ್ತಾಗಿಯೇ ಇತ್ತು. ಮೊದಲಿನಂತೆ ಮೃದುವಾದ ಸ್ಯಾಂಡಲ್ ವಾಸನೆ, ಮಲ್ಲಿಗೆಯ ಹೂ ಈಗ ಕಾಣಲಿಲ್ಲ. ಕುತ್ತಿಗೆಯಲ್ಲಿ ಒಂದೆಳೆ ಸರ. ಮೊದಲಿದ್ದ ಡಾಲರ್ ಚೈನ್ ಕಾಣಿಸಲಿಲ್ಲ. ಮನೆಯಲ್ಲಿರುವಾಗ ಯಾಕೆ ಎಂದು ಬಿಚ್ಚಿಟ್ಟಿರಬಹುದು. ಕಣ್ಣುಗಳಲ್ಲಿ ಒಂದು ಬಗೆಯ ಅಸ್ಥಿರತೆ ತುಂಬಿಕೊಂಡಂತೆ, ಆ ಕಣ್ಣುಗಳಲ್ಲಿ